# ಪತ್ರಿಕಾ ಪ್ರಕಟಣೆಯ ಕೃಪೆಗಾಗಿ

## ಮಕ್ಕಳ ಅಭಿಪ್ರಯವನ್ನು ವ್ಯಕ್ತಪಡಿಸುವ ಹಕ್ಕನ್ನು ಗೌರವಿಸಿ

ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನವನ್ನುಆಚರಿಸುತ್ತ– ಮಕ್ಕಳ ಹಕ್ಕಿಗಾಗಿ ಸೈಕ್ಲಿಂಗ್: ನಾರ್ವೆಇಂಡಿಯಾ ಬೈಕಥಾನ್

"ಮಕ್ಕಳ ಹಕ್ಕುಗಳಲ್ಲಿ ಮಕ್ಕಳ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಅತಿ ನಿರ್ಲಕ್ಷಿತವಾದದ್ದು ಎಂದಿದ್ದಾರೆ ಶೆತಿಲ್ ಉತ್ನೆ, ಈಗಷ್ಟೆ ಮಕ್ಕಳ ಹಕ್ಕುಗಳಿಗಾಗಿ ನಾರ್ವೆ ಇಂಡಿಯಾ ಬೈಕಥಾನ್ ಮುಗಿಸಿರುವ ಈ ಸಂದರ್ಭದಲ್ಲಿ. ನಾರ್ವೆ ದೇಶದ ರೊಟೇರಿಯನ್ ಹಾಗು ರಾಜಕಾರಣಿ ಆಗಿರುವ ಇವರು ಈ ಪ್ರಯಾಣವನ್ನು ಮಕ್ಕಳ ಹಕ್ಕುಗಳು ಹಾಗು ಅವರ ಭಾಗವಹಿಸುವಿಕೆಯನ್ನು ಎತ್ತಿ ಹಿಡಿಯುವುದರ ಜೊತೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿಖ್ಯಾತಿ ಹೊಂದಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಮೂರು ಬಾರಿನಾಮ ನಿರ್ದೇಶನ ಹೊಂದಿರುವ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್‌ಚಿಲ್ಡ್ರನ್ ಸಂಸ್ಥೆಯ ಪರವಾಗಿ ಈ ಪ್ರಯಾಣವನ್ನು ಕೈಗೊಂಡಿದ್ದಾರೆ. "ಸಿ.ಡಬ್ಲ್ಯೂ.ಸಿ ಸಂಸ್ಥೆಯಜೊತೆಗೆ ನನ್ನ ಒಡನಾಟ ಹಾಗು ಆ ಮೂಲಕ ಮಕ್ಕಳ ಹಕ್ಕುಗಳ ಬಗ್ಗೆ ನನಗಾದ ಪರಿಚಯ ಇವು ಇಲ್ಲದಿದ್ದರೆ ಈ ಯಾತ್ರೆ ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ ಶೆತಿಲ್. ನಾರ್ವೆ ದೇಶದ ಪ್ರಧಾನ ಮಂತ್ರಿಯಾದ ಎರ್ನಾ ಸೋಲ್ಬರ್ಗ್‌ಟ್ರಾಂಡ್‌ಹೈಮ್ ನಗರದ ಮೇಯರ್ ಮುಂತಾದಗಣ್ಯರು ಇವರ ಪ್ರಯಾಣಕ್ಕೆ ಬೆಂಬಲ ಸೂಚಿಸಿ ಉತ್ಸಾಹ ತೋರಿದ್ದಾರೆ.

ಇಂದು ಮಾನವ ಹಕ್ಕುಗಳ ಹಾಗು ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಪಂಚದಾದ್ಯಂತ ವ್ಯಾಪಕವಾಗಿದೆ.ಅವುಗಳ ವಿರುದ್ಧ ಧ್ವನಿ ಎತ್ತುವ ಪ್ರಜೆಗಳ, ಅದರಲ್ಲೂ ಸಣ್ಣ ವಯಸ್ಸಿನವರ, ಮಕ್ಕಳ ಭಾಗವಹಿಸುವಿಕೆಗೆ ಪದೇ ಪದೇ ಕಡಿವಾಣ ಹಾಕಲ್ಪಡುತ್ತಿದೆ. ಈ ಹಿನ್ನಲೆಯಲ್ಲಿ ಶಿತಿಲ್ ಉತ್ನೆ ಹಾಗು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಮಕ್ಕಳೊಡನೆ ಸಹಭಾಗಿತ್ವದಲ್ಲಿ ಮಕ್ಕಳ ಹಕ್ಕುಗಳಿಗಾಗಿ ಸಂಗ್ರಾಮ ನಡೆಸುವ ಅಗತ್ಯತೆಯ ಬಗ್ಗೆ ಎತ್ತಿ ಹಿಡಿಯುತ್ತಾರೆ.ಈಗಾಗಲೇ ತಮ್ಮ ಹಕ್ಕಿನ ಪರವಾಗಿ ಸುಸ್ಥಿರವಾದ ಮತ್ತು ದೀರ್ಘ ಕಾಲಿಕ ಬದಲಾವಣೆಗಳನ್ನು ಸಾಧಿಸಿರುವ ಮಕ್ಕಳ ಸಂಘಟನೆಗಳ ಉದಾಹರಣೆಗಳನ್ನು ನೀಡುತ್ತಾರೆ. ಬಾಲ್ಯವಿವಾಹದ ವಿರುದ್ಧ ಅಭಿಯಾನಗಳ ಮುಂಚೂಣಿಯಲ್ಲಿರುವ ಬಳ್ಳಾರಿಯಲ್ಲಿರುವ ಭೀಮಾ ಸಂಘದ (ದುಡಿಯುವ ಮಕ್ಕಳ ಸಂಘಟನೆ)ಉದಾಹರಣೆ, ಅನಧಿಕೃತ ಮಧ್ಯ ವ್ಯಾಪಾರದ ವಿರುದ್ಧಧ್ವನಿ ಎತ್ತಿರುವ ಮಕ್ಕಳ ಸಂಘಟನೆಗಳು, ಮಕ್ಕಳ ಗ್ರಾಮ ಸಭೆಯಂತಹ ಮುಖ್ಯವಾಹಿನಿಯಲ್ಲಿರುವ ವ್ಯವಸ್ಥೆಗಳನ್ನು ಬಳಸಿಕೊಂಡು ಆ ಮೂಲಕ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಿರುವ ಕುಂದಾಪುರದ ಮಕ್ಕಳ ಸಂಘಗಳ ಉದಾಹರಣೆಗಳನ್ನು ಅವರು ನೀಡುತ್ತಾರೆ.

ಜುಲೈ 17, 2018 ರಲ್ಲಿ ಪ್ರಾರಂಭವಾದ ಶೆತಿಲ್ ಉತ್ನೆಯ 10,000 ಕಿಲೋಮೀಟರ್ ಗಳ ಸೈಕಲ್ ಪ್ರಯಾಣ ನಾರ್ವೆ ದೇಶದಿಂದ ಪ್ರಾರಂಭವಾಗಿ ಸ್ವೀಡನ್, ಲಾತ್ವಿಯಾ, ಲಿಥುವೇನಿಯಾ, ಬೆಲಾರುಸ್, ಮೊಲ್ಡೋವಾ, ಯುಕ್ರೇನ್, ಜಾರ್ಜಿಯಾ, ಆರ್ಮೇನಿಯಾ, ಇರಾನ್ ಮತ್ತು ಪಾಕಿಸ್ತಾನ್ ದೇಶಗಳಲ್ಲಿ ಸಾಗಿ ಬಂದಿದೆ. ಈ 12 ದೇಶದಲ್ಲಿನ ಹಲವಾರು ಮಕ್ಕಳೊಡನೆ ಶೆತಿಲ್ ಚರ್ಚೆಗಳನ್ನು ನಡೆಸಿ ಅವರೊಂದಿಗೆ ಅವರ ಪರಿಸ್ಥಿತಿಗಳ ಬಗ್ಗೆ ಮಾತನಾಡಿದ್ದಾರೆ. ರಶ್ಯಾ ದೇಶದಲ್ಲಿ ನಡೆದ ಸಂಘರ್ಷಗಳ ಪ್ರಭಾವದಿಂದ ತಮ್ಮ ದೇಶದಿಂದ ಹೊರಗಾಗಿರುವ ಮಕ್ಕಳನ್ನು ಆರದಮೇನಿಯಾ ದೇಶದಲ್ಲಿ, ಬದಿಗೊತ್ತಲ್ಪಟ್ಟ ಹೆಣ್ಣು ಮಕ್ಕಳನ್ನು ಪಾಕಿಸ್ಥಾನದಲ್ಲಿ ಬೀದಿಯ ಸಂಪರ್ಕದಲ್ಲಿ ವಾಸಿಸುತ್ತಿರುವ ಮಕ್ಕಳನ್ನು ದೆಹಲಿಯಲ್ಲಿ, ದುಡಿಯುವ ಮಕ್ಕಳನ್ನು ಬೆಂಗಳೂರಿನಲ್ಲಿ, ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಘದ ಸದಸ್ಯರನ್ನು ಕುಂದಾಪುರದಲ್ಲಿ ಹೀಗೆ ಉದಾಹರಣೆಗಳು ಹೇರಳ. "ದೊಡ್ಡವರ ನಿಯಂತ್ರಣದಲ್ಲಿರುವ ದಿನಪತ್ರಿಕೆಗಳಂತಹ ಮಾಧ್ಯಮಗಳು ಮಕ್ಕಳ, ಅದರಲ್ಲೂ ಅತೀ ಬದಿಗೊತ್ತಲ್ಪಟ್ಟ ಮಕ್ಕಳ ಅಭಿಪ್ರಾಯಗಳನ್ನು ಅತೀ ವಿರಳವಾಗಿ ಪ್ರಕಟಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಹೇಗೆ

ಮಕ್ಕಳು ತಮ್ಮದೇ ಆದ ಮಾಧ್ಯಮಗಳನ್ನು ರಚಿಸಿ ಆ ಮೂಲಕ ತಮ್ಮ ಧ್ವನಿಯನ್ನು ಎತ್ತುತ್ತಿರುವ ಉದಾಹರಣೆಯು ಬಹಳ ಖುಷಿ ಕೊಟ್ಟಿದೆ"ಎನ್ನುತ್ತಾತೆ ಶೆತಿಲ್. ದೆಹಲಿಯ ಬೀದಿಯ ಸಂಪರ್ಕದಲ್ಲಿರುವ ಮಕ್ಕಳು ಹೊರತರುತ್ತಿರುವ ಬಾಲಕನಾಮ ಪತ್ರಿಕೆಯ ಬಗ್ಗೆ ವಿವರಿಸುತ್ತಾರೆ.

ಈ ಯಾತ್ರೆ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಪರ್ಯಾಯ ರಕ್ಷಣ ಮಾದರಿ, ಕುಂದಾಪುರದಲ್ಲಿರುವ ಪ್ರಾದೇಶಿಕ ಸಂಪನ್ಮೂಲ ಕೇಂದ್ರ, ನಮ್ಮ ಭೂಮಿಯ ಕೆಲಸಗಳನ್ನು ಎತ್ತಿ ಹಿಡಿಯುತ್ತದೆ. ಈ ಕಾರ್ಯಕ್ರಮವು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಮೂರು ದಶಕಗಳ ಕೆಲಸಗಳ ಒಂದು ಅಭಿವ್ಯಕ್ತಿ. ಈ ಸಂಸ್ಥೆ ಮಕ್ಕಳ ಹಕ್ಕುಗಳಿಗಾಗಿ ಕರ್ನಾಟಕದಲ್ಲಿ ಕ್ಷೇತ್ರ ಕಾರ್ಯಕ್ರಮಗಳನ್ನು ಒಳಗೊಂಡಿದ್ದು, ದೇಶ ಹಾಗು ಅಂತರಾಷ್ಟ್ರೀಯ ಮಟ್ಟದಲ್ಲಿಯೂ ನೀತಿ ನಿಯಮಗಳ ಬಗ್ಗೆ ವಕೀಲಿ ನಡೆಸುತ್ತಿರುವ, ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ (ವೆಬ್ಸೈಟ್: http://www.concernedforworkingchildren.org/)

ಶೆತಿಲ್ ಉತ್ನಯವರೊಂದಿಗೆ ಸಂದರ್ಶನ ನಡೆಸುವುದರಲ್ಲಿ ಅಸಕ್ತಿ ಇದ್ದಲ್ಲಿ, ಅಥವ ಹೆಚ್ಚಿನ ಮಾಹಿತಿಯ ಅಗತ್ಯವಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ:

ನಿಶಿತ ಖಜಾನೆ, ಸಿ.ಡಬ್ಲ್ಯೂ.ಸಿ: +91 9739362452

ಕವಿತಾ ರತ್ನ, ನಿರ್ದೇಶಕರು, ವಕೀಲಿ, ಸಿ.ಡಬ್ಲ್ಯೂ.ಸಿ: +91 9448990480